# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5722-2008

ಚಾಸಾ-12 ಪ್ರಾಸಾ-3

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಕಾಂತ |
| ತಂದೆಯ ಹೆಸರು | ಡಿ.ವಿ. ಪತಂಜಲಿ |
| ವಯಸ್ಸು | 54 ವರ್ಷ |
| ಉದ್ಯೋಗ | ಫಿರ್ಯಾದಿ ಕಂಪನಿ ನೌಕರ |
| ವಾಸ | ಚೆನ್ನೈ. |
| ಪ್ರಮಾಣೀಕರಿಸಿದ ದಿನಾಂಕ | 11/07/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಫಿರ್ಯಾದಿ - ಎ.ಎಸ್. ಕಾರ್ಗೋ ಕಂಪನಿಯಲ್ಲಿ 2005 ರಿಂದ ಕೆಲಸ ಮಾಡುತ್ತಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಫಿರ್ಯಾದಿದಾರರಿಗೆ ಪಿ.ಎ. ಆಗಿ ಕೆಲಸ ಮಾಡುತ್ತಿದ್ದರು. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದಿನಾಂಕ 22/04/2006 ರಂದು ಮಾಡಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಪೊಲೀಸರು ನಮ್ಮನ್ನು ರಾಜರಾಜೇಶ್ವರಿ ನಗರದ 3 ನೇ ಹಂತದಲ್ಲಿರುವ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ನಮ್ಮ ಸಮಕ್ಷಮ ಮನೆಯನ್ನು ಪರಿಶೀಲನೆ ಮಾಡಿದರು. ಪೊಲೀಸರು ಸದರಿ ಮನೆಯನ್ನು ಶೋಧನೆ ಮಾಡಿ ಪ್ರಕರಣಕ್ಕೆ ಸಂಬಂಧಪಟ್ಟ ಸುಮಾರು 4-5 ದಾಖಲೆಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ, ಪಂಚನಾಮೆ ಮಾಡಿ ನಮ್ಮಗಳ ಸಹಿಗಳನ್ನು ಪಡೆದರು. ನನ್ನೊಂದಿಗೆ

ಚಾಸ-11 ರಮೇಶ ರವರು ಸಹ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಪಂಚನಾಮೆಯನ್ನು ಮದ್ಯಾಹ್ನ 03.00 ಗಂಟೆಯಿಂದ 04.00 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ. ನಿಮ್ಮ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ನೋಡಿ ಗುರುತಿಸಲು ಸಾಧ್ಯವಾಗುವುದೇ ಎಂಬ ಪ್ರಶ್ನೆಗೆ ಸಾಕ್ಷಿಯು ಬಹಳ ವರ್ಷಗಳಾಗಿರುವುದರಿಂದ ಗುರುತಿಸಲು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ.

2. ಸಾಕ್ಷಿಯು ದಿನಾಂಕ 22/04/2006 ರಂದು ಮಾಡಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಪೊಲೀಸರು ನಮ್ಮನ್ನು ಜೆ.ಸಿ. ರೋಡ ಯುನಿಟಿ ಬಿಲ್ಡಿಂಗ್ ನ ನಮ್ಮ ಕಛೇರಿಗೆ ಕರೆದುಕೊಂಡು ಹೋದರು. ಪೊಲೀಸರು ಅಲ್ಲಿ ನಮ್ಮ ಸಮಕ್ಷಮ ನಿಪಿ-17 ರಂತೆ ಪಂಚನಾಮೆ ಮಾಡಿದ್ದರು. ನಿಪಿ-17 ಪಂಚನಾಮೆಗೆ ಚಾಸ-11 ರಮೇಶ ರವರು ಸಹ ಸಹಿ ಮಾಡಿರುತ್ತಾರೆ. ನಮ್ಮ ಕಛೇರಿಯಲ್ಲಿ ಆರೋಪಿ ಸಾಧನಾ ರವರು ಕುಳಿತುಕೊಳ್ಳುತ್ತಿದ್ದ ಸ್ಥಳದ ಬಗ್ಗೆ ಮಾಹಿತಿ ಕೇಳಿದರು, ನಾವು ಆರೋಪಿ ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ತೋರಿಸಿದೆವು, ಅಲ್ಲಿ ಪೊಲೀಸರು ಶೋಧನೆ ಮಾಡಿದರು, ಆದರೆ ಯಾವುದೇ ಪ್ರಮುಖ ದಾಖಲೆಗಳು ಕಂಡುಬರಲಿಲ್ಲ.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿರುತ್ತಾರೆ. ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 17/01/2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

3. ಆರೋಪಿ ಸಾಧನಾ ಇವರ ರೆಸಿಗ್ನೆಶನ್ ಲೆಟರ್, ಲೆಡ್ಜರ ಬುಕ್, ಓರಿಯಂಟಲ್ ಇನ್ಸೂರೆನ್ಸನ ಕೆಲವೊಂದು ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳನ್ನು ಪೊಲೀಸ್ ಅಧಿಕಾರಿಗಳು ನಿಪಿ-16 ಪಂಚನಾಮೆಯ ಸಮಯದಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ನಾನು ಈಗ ನೋಡುತ್ತಿರುವ ದಾಖಲೆ ಆರೋಪಿ ಫ್ಯಾಕ್ಸ ಮೂಲಕ ಕಳಹಿಸಿರುವ ರೆಸಿಗ್ನೆಶನ್ ಲೆಟರ್ ನ 1 ನೇ ಪುಟವಾಗಿರುತ್ತದೆ. 2 ನೇ ಪುಟದಲ್ಲಿರುವ ಓಚರ್ ನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಆದ್ದರಿಂದ ಸದರಿ 1 ನೇ ಪುಟಗಳನ್ನು ನಿಪಿ-22 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ಲೆಡ್ಜರ್ ಅಕೌಂಟ್ ಆಗಿದ್ದು, ಅದು 64 ಪುಟ ಇರುತ್ತದೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ದಾಖಲೆ ಗಣಕೀಕೃತ ದಾಖಲೆಯಾಗಿದ್ದು, ಅದಕ್ಕೆ ಯಾರು ದೃಡೀಕೃತ ಮಾಡಿರುವುದಿಲ್ಲ, ಆದ್ದರಿಂದ ನಿಶಾನೆಯಾಗಿ ಮಾಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಹಿರಿಯ ಸ.ಸ.ಅ ರವರು ಆ ಕುರಿತು ಕಲಂ. 65(ಬಿ) ಭಾ.ಸ.ಅ ಅಡಿ ದೃಡೀಕರಣ ಪ್ರಮಾಣ ಪತ್ರ ಸಲ್ಲಿಸುತ್ತೇವೆ, ಕಾರಣ ಅದನ್ನು ಗುರುತಿಸಬಹುದು ಎಂದು ವಿನಂತಿಸಿಕೊಂಡಿದ್ದರಿಂದ, ಸದರಿ 64 ಪುಟಗಳ ದಾಖಲೆಯನ್ನು ನಿಪಿ-23 ಎಂದು ಗುರುತಿಸಲಾಯಿತು ಮತ್ತು ಆ ಕುರಿತು ಕಲಂ. 65(ಬಿ) ಭಾ.ಸ.ಅ ಅಡಿ ಪ್ರಮಾಣ ಪತ್ರ ನೀಡಲು ಸೂಚಿಸಲಾಯಿತು.

4. ಅದರಂತೆ ನಾನು ಈಗ ನೋಡುತ್ತಿರುವ ದಾಖಲೆ ಕ್ಯಾಶ ಪುಸ್ತಕ ಆಗಿದ್ದು, ಅದನ್ನು ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತಾರೆ. ಅದು 35 ಪುಟಗಳಿದ್ದು, ಈ ಹಂತದಲ್ಲಿಆರೋಪಿ ಪರ ವಕೀಲರು ಸದರಿ ದಾಖಲೆ ಗಣಕೀಕೃತ

ದಾಖಲೆಯಾಗಿದ್ದು, ಅದಕ್ಕೆ ಯಾರು ದೃಡೀಕೃತ ಮಾಡಿರುವುದಿಲ್ಲ, ಆದ್ದರಿಂದ ನಿಶಾನೆಯಾಗಿ ಮಾಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಹಿರಿಯ ಸ.ಸ.ಅ ರವರು ಆ ಕುರಿತು ಕಲಂ. 65(ಬಿ) ಭಾ.ಸ.ಅ ಅಡಿ ದೃಡೀಕರಣ ಪ್ರಮಾಣ ಪತ್ರ ಸಲ್ಲಿಸುತ್ತೇವೆ, ಕಾರಣ ಅದನ್ನು ಗುರುತಿಸಬಹುದು ಎಂದು ವಿನಂತಿಸಿಕೊಂಡಿದ್ದರಿಂದ, ಸದರಿ 35 ಪುಟಗಳ ದಾಖಲೆಯನ್ನು ನಿಪಿ-24 ಎಂದು ಗುರುತಿಸಲಾಯಿತು ಮತ್ತು ಆ ಕುರಿತು ಕಲಂ. 65(ಬಿ) ಭಾ.ಸ.ಅ ಅಡಿ ಪ್ರಮಾಣ ಪತ್ರ ನೀಡಲು ಸೂಚಿಸಲಾಯಿತು. ಓರಿಯಂಟಲ್ ಇನ್ಶೂರೆನ್ಸ ನ ಪಾಲಿಸಿ ಯ ಮೂಲ ಪ್ರತಿ ಮತ್ತು ಪ್ರಾಸ್ಪೆಕ್ಟರ್ಸ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-25 ಮತ್ತು 26 ಎಂದು ಗುರುತಿಸಲಾಯಿತು. ಓರಿಯಂಟಲ್ ಇನ್ಶೂರೆನ್ಸನ ಇನ್ನೊಂದು ಮೂಲ ಪ್ರತಿಯನ್ನು ನನ್ನ ಸಮಕ್ಷಮ ಪೊಲೀಸರು ಜಪ್ತಿಪಡಿಸಿಕೊಂಡಿದ್ದು, ಅದು 3 ಪುಟ ಒಳಗೊಂಡಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು. (ಮಾಲುಪಟ್ಟಿ ನಂ. 32/2006 ರ ಐಟೆಂ ನಂ. 4 ರಲ್ಲಿ ನಿಪಿ-25 ರಿಂದ 27 ದಾಖಲೆಗಳನ್ನು ಒಂದೇ ದಾಖಲೆ ಎಂದು ನಮೂದಿಸಲಾಗಿದೆ).

ಈ ಹಂತದಲ್ಲಿ ಮಾಲು ಪಟ್ಟಿ ಸಂಖ್ಯೆ. 32/2006 ರಲ್ಲಿ ಕ್ರಮ ಸಂಖ್ಯೆ. 1 ರ ದಾಖಲೆಯನ್ನು ತನಿಖಾಧಿಕಾರಿ ಹಾಜರು ಪಡಿಸದೆ ಇರುವುದರಿಂದ, ಮುಂದುವರಿದ ಮುಖ್ಯ ವಿಚಾರಣೆಗೆ ಹಿ.ಸ.ಸ.ಆ ರವರು ಸಮಯ ಕೋರಿದ್ದರಿಂದ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**